ಶ್ರೀ ಹೆಚ್. ಎಸ್. ಸಿದ್ದಪ್ಪ.—ಅಷರತುಗಳ ವಿವರಗಳನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಅಧ್ಯಕ್ಷರ ಅಪ್ಪಣೆ ಆದರೆ ಹೇಳುತ್ತೇನೆ.

ಅಧ್ಯಕ್ಷರು.—ಹೇಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಿನಿಮಾ ಥಿಯೇಟ್ರಿನವರನ್ನು 85 ಸಾವಿರ ರೂಪಾಯಿ ಖರ್ಚಿನಲ್ಲಿ ಕಟ್ಟಬೇಕೆಂದು ಷರತ್ತು ಹಾಕಿದೆ. ತಾರೀಖು 23-5-1959 ರಲ್ಲಿ ಆ ಸೈಟನ್ನು ಪೊಸಿಷನ್‌ಗೆ ಕೊಟ್ಟತು. ಒಂದು ವರ್ಷ ಕಳೆಯಿತು, ಕಟ್ಟಡ ಪ್ರಾರಂಭವಾಗಲಿಲ್ಲ. ಮತ್ತು ಅವರು ಟೈಂ ಎಕ್ಸ್‌ಟೆಂಡ್ ಮಾಡುವುದಕ್ಕೆ ಅರ್ಜಿ ಕೊಟ್ಟರು 1968 ರವರೆಗೂ ಇನ್ನೂ ಆ ಬಗ್ಗೆ ತೀರ್ಮಾನವಾಗಲಿಲ್ಲ. ಅವಾದ ಮೇಲೆ 2 ವರ್ಷ ಟೈಂ ಎಕ್ಸ್‌ಟೆಂಡ್ ಮಾಡಬೇಕು ಎಂದು ಕೇಳಿದರು. ಒಂದು ವರ್ಷ ಕೊಟ್ಟರು. ಆದಾದಮೆಲೆ 1972 ನೇ ಇಸವಿ ಫೆಬ್ರುವರಿಯಲ್ಲಿ ಇನ್ನು 6 ತಿಂಗಳು ಟೈಂ ಎಕ್ಸ್‌ಟೆಂಡ್ ಮಾಡಬೇಕು ಎಂದು ಅರ್ಜಿ ಕೊಟ್ಟರು ಈಗ ಅದು ರೂಫಿಂಗ್ ಮಟ್ಟಕ್ಕೆ ಬಂದಿದೆ. ಇಷ್ಟರಲ್ಲೆ ಆ ಕೆಲಸ ಆಗ್ಬಹುದು ಎಂದು ನಾನು ತಿಳಿದಿದ್ದೇನೆ.

ಶ್ರೀ ಹೆಚ್. ಎಸ್ ಸಿದ್ದಪ್ಪ.— ಈಗ ತಾವು ಹೇಳಿದಂತೆ 1959ನೇ ಇಸವಿಯಲ್ಲಿ ಆ ಸೈಟನ್ನು ಪೊಸಿಷನ್‌ಗೆ ಕೊಟ್ಟು ಒಂದು ವರ್ಷವಾದರೂ ಕಟ್ಟಡ ಆಗಲಿಲ್ಲ, ಮತ್ತು 1968 ರಲ್ಲಿ ಇನ್ನೂ ಒಂದು ವರ್ಷ ಟೈಂ ಕೊಟ್ಟರೂ ಕಟ್ಟಡ ಆಗಲಿಲ್ಲ, ಪುನ : 1972 ನೇ ಇಸವಿಯಲ್ಲಿ 6 ತಿಂಗಳು ಟೈಂ ಕೇಳಿದರೂ ಕೂಡ ಕಟ್ಟಡ ಆಗಲಿಲ್ಲ ಎಂದು. ಈ ಹೊತ್ತಿನ ದಿವಸ ಆ ದೇವಸ್ಥಾನಕ್ಕೆ ಅದರಿಂದ ಏನು ಲುಕ್ಸಾನು ಆಗಿದೆಯೋ ಅದಕ್ಕೆ ಜವಾಬ್ದಾರರು ಯಾರು ? ಆದರಿಂದ ಲೀಸ್ ಕಂಡೀಷನ್‌ನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ ? ಈವಾಗ ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಅವರು ಕಟ್ಟಡ ಕಟ್ಟಬೇಕು ಇದ್ದರೂ ಕೂಡ ತಿಂಗಳು ಒಂದಕ್ಕೆ 60 ರೂಪಾಯಿ ಬಾಡಿಗೆ ಕೊಡಬೇಕು ಎಂದು ಏನು ಷರತ್ತು ಹಾಕಿದ್ದೇವೋ ಅದು ಬರುತ್ತಾ ಬಾಡಿಗೆ ಇದೆ. ಬಾಕಿ ಇಲ್ಲಾ. ಆದುದರಿಂದ ದೇವಸ್ಥಾನಕ್ಕೆ ಏನೂ ನಷ್ಟವಾಗಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ, ಸಿನಿಮಾ ಥಿಯೇಟರ್ ಲೀಸ್‌ನ್ನು 30 ವರ್ಷ ಇದ್ದುದನ್ನು 40 ವರ್ಷಕ್ಕೆ ಹೆಚ್ಚು ಮಾಡಿದ್ದೀರಿ. ಆ ಕಟ್ಟಡವನ್ನು ಇನ್ನು 20 ವರ್ಷಕ್ಕೆ ಕಟ್ಟದರೆ, ಆಲ್ಲಿಂದ 40 ವರ್ಷ ಲೀಸ್‌ಗೆ ಅವರಿಗೆ ಕೊಟ್ಟರೆ ಇದರಿಂದ ಲುಕ್ಸಾನು ಆಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾರೀಖು 28-4-1958 ರಿಂದ 40 ವರ್ಷವಾಗುತ್ತದೆ. ಥಿಯೇಟರ್ ಕಟ್ಟಿದ ಮೇಲೆ ವಾಯಿದೆ ಬರುವುದಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ —ಇದರಲ್ಲಿ ಒಂದು ನಲಹಾ ಮಂಡಲಿ ಇದೆ. ಅವರಿಗೆ ಈ ಬಗ್ಗೆ ಅಗ್ರಿಮೆಂಟ್ ಆದದ್ದು, ಲೀಸ್ ಡೀಡ್ ಆದುದ್ದು ಗೊತ್ತಿಲ್ಲ. ಇದರ ವ್ಯವಹಾರ ನೋಡಿದರೆ ಇಷ್ಟೊಂದು ತಡವಾಗಿದೆ. ಆದುದರಿಂದ ಅಗ್ರಿಮೆಂಟ್‌ನಲ್ಲಿ ಏನು ಇದೆ ? ಲೀಸ್ ಕಂಡೀಷನ್ಸ್‌ನಲ್ಲಿ ಏನು ಇದೆ ? ಅದನ್ನು ಸಭೆಯ ಮುಂದೆ ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಹತ್ತಿರ ಅಗ್ರಿಮೆಂಟ್ ಮತ್ತು ಲೀಸ್ ಕಂಡೀಷನ್ಸ್ ಎಲ್ಲಾ ಇದೆ, ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದರೆ ಬಂದು ಆ ಷರತ್ತುಗಳನ್ನು ನೋಡಬಹುದು.

SHORT NOTICE QUESTION AND ANSWER

Co-operative Appellate Tribunal

(9) Sri J. L. KABADE (Ballolli).—

Will the Minister for Co-operation be pleased to state :—

(a) whether the Government is aware that Co-operative Appellate Tribunal was closed from 12th to 19th February 1973 as one of the members had gone to Calcutta ;

(*b*) the steps taken to amend the Act to enable the three Members of this Tribunal to decide the matters as per the decision of High Court ?

Sri A. SHANKAR ALVA (Minister for Co-operation).—

(*a*) Yes.

(*b*) An amendment to the relative section of the Mysore Co-operative Societies Act has been included in the Mysore Co-operative Societies Amendment Bill 1973 containing several other amendments which has been introduced in the Assembly during February 1973.

ಶ್ರೀ ಜೆ. ಎಲ್. ಕಬಾಡಿ.—ಸಹಕಾರೀ ಮೇಲ್ಮನವಿ ನ್ಯಾಯ ಮಂಡಲ ಸದಸ್ಯರೊಬ್ಬರು ಗೈರು ಹಾಜರಾಗಿದ್ದರು. ಅವರ ಗೈರು ಹಾಜರಿಯಲ್ಲಿ ಎಷ್ಟು ಕೇಸುಗಳು ಉಳಿದಿವೆ ?

ಶ್ರೀ ಎ. ಶಂಕರ ಆಳ್ವ.—ಅವರು ಯಾವುದೋ ಒಂದು ಕೋರ್ಟಿಗೆ ಎವಿಡೆನ್ಸ್ ಕೊಡುವ ಸಲುವಾಗಿ ಕಲ್ಕತ್ತೆಗೆ ಹೋಗಿದ್ದರು. ಅವರ ಗೈರು ಹಾಜರಿಯಲ್ಲಿ ಆ ಕೇಸ್‌ಗಳನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಇಬ್ಬರು ಸೇರಿ ಒಂದು ಬೆಂಚ್ ಮಾಡಿ ಕೂಡಬಹುದು ಎಂಬುದನ್ನು ಮಾಡಿದ್ದೇವೆ.

ಶ್ರೀ ಜಿ. ಎಲ್. ಕಬಾಡಿ.—ಸ್ವಾಮಿ, ಪ್ರಶ್ನೆ ಏನೆಂದರೆ ಅವರು ಎಷ್ಟು ದಿವಸ ಗೈರು ಹಾಜರಾಗಿದ್ದರು ಮತ್ತು ಆ ದಿವಸದಲ್ಲಿ ಎಷ್ಟು ಕೇಸುಗಳು ಉಳಿದಿವೆ ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರು 12 ನೇ ದಿನಾಂಕದಿಂದ 19ನೆ ದಿನಾಂಕದವರೆಗೆ ಹಾಜರಾಗಿದ್ದಾರೆ. ಎಷ್ಟು ಕೇಸುಗಳು ಉಳಿದಿವೆ ಎಂದು ಹೇಳುವುದಕ್ಕೆ ಅದರ ವಿವರ ನನ್ನಲ್ಲಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಂಡರೆ ಅದು 2 ವರ್ಷ ವಾದರೆ ಅದರ ಲಿಮಿಟೇಷನ್ ಮುಗಿದು ಹೋಗುತ್ತದೆ. ಆದ್ದರಿಂದ ಅದರೊಳಗಾಗಿ ಎಷ್ಟು ಕೇಸುಗಳು ಟ್ರಿಬ್ಯೂನರ್ ಮುಂದೆ ಬಂದಿವೆ ? ಅರೀತಿ ಸರಿಯಾದ ಚೈನಿನಲ್ಲಿ ದಾಖಲ್ ಮಾಡದೇ ಇರುವುದರಿಂದ 10 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ತಿಳಿದಿದ್ದೇನೆ. ಅದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎ. ಶಂಕರ ಆಳ್ವ.— ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ ಉಚ್ಚ ನ್ಯಾಯ ಮಂಡಲಯವರು ಮೂರು ಸದಸ್ಯರನ್ನೊಳಗೊಂಡ ಸಮಿತಿಯನ್ನು ನೀವು ಮಾಡಿ ಎಂದು ಹೇಳಿದ್ದಾರೆ. ಅದರಲ್ಲಿ ಜುಡಿಷಿಯರಿಂದ ಒಬ್ಬರು, ಜಾಯಿಂಟ್ ರಿಜಿಸ್ಟ್ರಾರ್ ಇರಾಜೆಯವರು ಒಬ್ಬರು, ಇನ್ನೊಬ್ಬರು 10 ವರ್ಷ ಪ್ರಾಕ್ಟೀಸ್ ಇರತಕ್ಕಂಥಾವರು ಒಬ್ಬರು ಎಂದು ಹೇಳಿದ್ದಾರೆ. ಅದಕ್ಕೆ ಬದಲಾಗಿ ಇದನ್ನು ಜುಡಿಪಿಯರ್‌ಗೇ ಏತಕ್ಕೆ ಒಪ್ಪಿಸಬಾರದು ?

ಶ್ರೀ ಎ. ಶಂಕರ ಆಳ್ವ.—ನಿಮ್ಮ ಆಲೋಚನೆ ಪ್ರಕಾರ ಆದೇ ಕಂಟಿನ್ಯೂ ಆದರೆ ಸಾಕು. ಈ ವಾಗ ಇಬ್ಬರು ಸೇರಿದರೆ ಒಂದು ಬೆಂಚು ಕೂಡಬಹುದು ಎಂದು ಮಾಡಿದ್ದೇವೆ. ಈ ವಿಚಾರದಲ್ಲಿ ನಾವು ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಜೆ. ಎಲ್. ಕಬಾಡಿ – ಸಹಕಾರೀ ಸಂಘಗಳಲ್ಲಿ ಸಾಲ ತೆಗೆದುಕೊಂಡು ಅವರಿಂದ ವಸೂಲಾಗದೇ ಇದ್ದರೆ, ಆ ಅವಧಿ 2 ವರ್ಷ ಮೀರಿದಲ್ಲಿ ಕಾನೂನಿನ ಪ್ರಕಾರ ಆ ಹಣವನ್ನು ವಸೂಲ್ಮಾಡಲು ಟ್ರಿಬ್ಯೂನಲ್ ಮುಂದೆ ಹೋಗುವುದಕ್ಕೆ ಅವಕಾಶವಿಲ್ಲ. ಆ ಬಗ್ಗೆ ಸಹಕಾರ ಸಂಘಗಳಿಂದಾಗಲಿ ಅಥವಾ ಸರ್ಕಾರದಿಂದಾಗಲಿ ಈ ವಿಚಾರದಲ್ಲಿ ಒಂದು ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಹಣ ಲ್ಯಾಪ್ಸ್ ಆಗುತ್ತದೆ. ಈ ಅಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ ! ಮತ್ತು ಇದಕ್ಕೆ ಜವಾಬ್ದಾರರು ಯಾರು ಎಂದು ಸರ್ಕಾರ ಕಂಡುಹಿಡಿದು ಆ ಹಣ ಲ್ಯಾಪ್ಸ್ ಆಗಿದೇ ಇರುವ ಹಾಗೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎ. ಶಂಕರ ಆಳ್ವ.—ಹಣ ಲ್ಯಾಪ್ಸ್ ಆದರೆ ಅವರಿಗೆ ನರ್‌ವಾರ್ಜ್ ಮಾಡುತ್ತೇವೆ ಈವಾಗ 2 ವರ್ಷ ಅವಧಿ ಇರುವುದನ್ನು 6 ವರ್ಷ ಮಾಡಬೇಕು ಅಂತ ಮಾಡಿದ್ದೇವೆ.

MADAM SPEAKER.—Question Hour is over.